

ವಾರಾಣಸಿ ನಗರದ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವಂತೆ ಗಂಗೆಯ ತಟದಲ್ಲಿ ಕಿಕ್ಕಿರಿದಿರುವ ಬಣ್ಣಬಣ್ಣದ ಮನೆಗಳು

ಬರುತ್ತದೆ. ಸೊನ್ನೆ ಅಥವ ಒಂದು. ವಿದ್ಯುತ್ ದೀಪದ ಗುಂಡಿಗೆ ಆನ್ ಅಥವಾ ಆಫ್ ಸ್ಥಿತಿಗಳು ಇದ್ದಂತೆ. ಇಂಟರ್‌ನೆಟ್ ಎನ್ನುವ ಹಗ್ಗದಿಂದ ಬಿಗಿಯಾಗಿ ಬೆಸೆದು ಬಿದ್ದಿರುವ ನಮ್ಮ ಇಡೀ ಆಧುನಿಕ ಪ್ರಪಂಚ ಇದೇ ಬೈನರಿ ಲಾಜಿಕ್ ಅನ್ನು ನೆಚ್ಚಿ ಕುಳಿತಿದೆ. ಒಂದು ಸ್ವಿಚ್ಚು ಒಂದೇ ಕಾಲಕ್ಕೆ ಆನ್ ಮತ್ತು ಆಫ್ ಎರಡೂ ಅಗಿರಲು ಸಾಧ್ಯವಿಲ್ಲ. ಒಂದೋ, ನೀನು ಪರವಿರಬೇಕು ಅಥವಾ ವಿರುದ್ಧವಿರಬೇಕು. ಆಸ್ತಿಕನಾಗಿರಬೇಕು ಅಥವಾ ನಾಸ್ತಿಕನಾಗಿರಬೇಕು. ವಾರಾಣಸಿಯಲ್ಲಿ ಬೈನರಿ ಲಾಜಿಕ್ ಕೆಲಸ ಮಾಡುವುದಿಲ್ಲ. ಅಲ್ಲಿ ಆನ್ ಮತ್ತು ಆಫ್‌ಗಳ ನಡುವೆ ಹತ್ತು ಸಾವಿರ ಸ್ಥಿತಿಗಳು ಬರುತ್ತವೆ. ವೈರಾಗ್ಯ ಸ್ಥಿತಿಯಲ್ಲಿ ಹತ್ತು ಸಾವಿರ ಹಂತಗಳಲ್ಲಿರುವ ಲಕ್ಷ ಜನರು ಗಂಗೆಯ ದಂಡೆಯಲ್ಲಿ ತಮ್ಮದೇ ವಿನೀತ ಭಾವಲಹರಿಯಲ್ಲಿ ನಿಂತಿರುತ್ತಾರೆ. ಸತ್ಯ ಮತ್ತು ಅಸತ್ಯಗಳು ಹತ್ತು ಸಾವಿರ ತುಂಡುಗಳಾಗಿ ಹರಿದು ಹಂಚಿಹೋಗಿರುತ್ತವೆ. ತುಂಡುಗಳು ಮತ್ತೂ ತುಂಡುಗಳಾಗಿ ಅಣುಗಳಷ್ಟಾಗಿ ಗಾಳಿಯ ಬೀಸಿಗೆ ಮತ್ತೊಂದು ತುದಿಯನ್ನು ನಿರಾಯಾಸವಾಗಿ ಸೇರಿಬಿಡುತ್ತವೆ. ಕೊನೆಗೆ ಬುದ್ಧ ಕಂಡುಕೊಂಡ ಧರ್ಮಚಕ್ರದಂತೆ ಸೊನ್ನೆ ಒಂದಾಗಿ ಒಂದು ಸೊನ್ನೆಯಾಗಿ ಹೋಗುತ್ತವೆ, ಟೆನ್ನಿಸ್ ಆಟಗಾರರು ಬೆಸಸಂಖ್ಯೆಯ ಗೇಮಿನ ನಂತರ ಕೋರ್ಟ್ ಬದಲಿಸಿಕೊಳ್ಳುವಂತೆ. ಮುಚ್ಚಿಕೊಳ್ಳುವುದು ಮತ್ತು ತೆರೆದುಕೊಳ್ಳುವುದಕ್ಕೆ ವ್ಯತ್ಯಾಸ ಉಳಿಯುವುದಿಲ್ಲ. ಪಡೆದುಕೊಳ್ಳುವುದು ಮತ್ತು ಕಳೆದುಕೊಳ್ಳುವುದಕ್ಕೂ. ವಾರಾಣಸಿಯಲ್ಲಿ ಓಡಾಡಲು ಬರಿಮೈಯ ಬಾಬಾನಿಗೆ ಸಂಕೋಚವಾಗುವುದಿಲ್ಲ, ಅವನ ಸುತ್ತಲ ಬಟ್ಟೆ ಧರಿಸಿದ ಸಾವಿರ ಜನಕ್ಕೂ. ಹಾಗೆಯೇ, ವ್ಯತ್ಯಾಸವೇ ಉಳಿಯುವುದಿಲ್ಲ, ಕೈಚಾಚಿ ಅಗಲಿಸಿ ರಸ್ತೆಯ ಎರಡೂ ಬದಿಗಳನ್ನು ಮುಟ್ಟಬಹುದಾದ ಚಿಕ್ಕ ಚಿಕ್ಕ ಗಲ್ಲಿಗಳಲ್ಲಿ ಬಿಸಿಲು ಕಾಯಿಸುತ್ತ ಕುಳಿತುಕೊಳ್ಳುವ ಸರ್ವಶಕ್ತ ದೇವರುಗಳಿಗೂ ಮತ್ತು ದೇವರ ಮುಖಕ್ಕೇ ನೀರು ಚಿಮ್ಮುವಂತೆ ಎಮ್ಮೆಗಳನ್ನು ತೊಳೆಯುವ ನರಮನುಷ್ಯರಿಗೂ. ಯಾರು ಯಾರನ್ನು ಸೃಷ್ಟಿ ಮಾಡಿದರೋ, ದೇವರು ಮನುಷ್ಯನನ್ನೋ; ಮನುಷ್ಯ ದೇವರನ್ನೋ, ಸುಲಭಕ್ಕಿಲ್ಲಿ ಬಗೆಹರಿಯುವುದಿಲ್ಲ. ಈ ಬಗೆಯ ದ್ವಂದ್ವಗಳನ್ನು ಬಗೆಹರಿಸಿಕೊಳ್ಳಲು ಹೋಗಿಯೇ ಬೌದ್ಧರಿಗೆ ಸದಾ ತಿರುಗುವ ಧರ್ಮ



ಸಾಧುವಿನ ಅಲಂಕಾಲವನ್ನು ಕುತೂಹಲದಿಂದ ಗಮನಿಸುತ್ತಿರುವ ಬಾಲೆ